## Andolana

**Date:** 28-01-2021 **Page No:** 6

**Edition:** Mysore **Language:** Kannada

# 'ಹೊಣೆಗಾರಿಕೆ ಹೆಚ್ಚಿಸುವ ಹೊಸ ಶಿಕ್ಷಣ ನೀತಿ'

## ಎಸ್‌ಡಿಎಂ ಘಟಿಕೋತ್ಸವದಲ್ಲಿ ಸಂಸ್ಥೆ ಅಧ್ಯಕ್ಷ ಡಾ.ವೀರೇಂದ್ರ ಹೆಗ್ಗಡೆ ನುಡಿ

ಮೈಸೂರು: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ವಿದ್ಯಾಲಯದ ವರ್ಚುವಲ್ ಮೂಲಕ ನಡೆದ ಮೊದಲ ವಾರ್ಷಿಕ ಘಟಿಕೋತ್ಸವದಲ್ಲಿ 2020-21ನೇ ಸಾಲಿನ 11 ಮಂದಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಬುಧವಾರ ಶ್ರೀ ಧರ್ಮಸ್ಥಳ ಧರ್ಮಾಧಿಕಾರಿ ಮತ್ತು ಎಸ್‌ಡಿಎಂಐಎಂಡಿ ಅಧ್ಯಕ್ಷ ಡಾ.ಡಿ.ವೀರೇಂದ್ರ ಹೆಗ್ಗಡೆ ಉಪಸ್ಥಿತಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ಬಳಿಕ ಮಾತನಾಡಿದ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು, ವಿದ್ಯಾರ್ಥಿಗಳು ಸ್ವಂತ ಉದ್ಯಮಗಳಲ್ಲಿ ಉತ್ತಮ ಸಾಧನೆ ತೋರುವುದಲ್ಲದೇ, ಭಾರತೀಯ ಮೌಲ್ಯಗಳು ಮತ್ತು ನೀತಿಗಳನ್ನು ಹಿಡಿದಿಟ್ಟುಕೊಳ್ಳಬೇಕು. ಹೊಸ ಶಿಕ್ಷಣ ನೀತಿ(ಎನ್‌ಇಪಿ) ಹಲವಾರು ಸಿದ್ಧಾಂತಗಳನ್ನು ಹೊಂದಿದೆ. ಈ ನೀತಿಯನ್ನು ಧರ್ಮಸ್ಥಳ ಸಂಸ್ಥೆಗಳ ಸಮೂಹ ಅನುಸರಿಸುತ್ತಾ ಬಂದಿದೆ. ಸಮಗ್ರತೆ, ಕೃತಜ್ಞತೆ ಮತ್ತು ಸಾಮಾಜಿಕ ಹೊಣೆಗಾರಿಕೆಗಾಗಿ ಭಾರತೀಯ ಮೌಲ್ಯಗಳು ಮತ್ತು ಮನೋಭಾವವನ್ನು ಎತ್ತಿ ಹಿಡಿಯುವ ಶಿಕ್ಷಣ ವ್ಯವಸ್ಥೆ ಎನ್‌ಇಪಿ ಆಗಿದೆ ಎಂದು ಹೇಳಿದರು.

ಕಳೆದ ವರ್ಷದಲ್ಲಿ ಸಂಸ್ಥೆಯ ಚಟುವಟಿಕೆಗಳು ಮತ್ತು ಸಾಧನೆಗಳ ಸಂಕ್ಷಿಪ್ತ ವರದಿಯನ್ನು ಸಂಸ್ಥೆಯ ನಿರ್ದೇಶಕ ಡಾ.ಎನ್.ಆರ್.ಪರಶುರಾಮನ್ ಮಂಡಿಸಿದರು. ಆಡಳಿತ ಮಂಡಳಿ ಸದಸ್ಯರು ಮತ್ತು ಸಂಸ್ಥೆಯ ಅನೇಕ ಹಿತೈಷಿಗಳು ಮತ್ತು ಸಾಂಸ್ಥಿಕ ಅತಿಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಸಂಸ್ಥೆಯ ಉಪ ನಿರ್ದೇಶಕರಾದ ಡಾ.ಎಚ್.ಗಾಯತ್ರಿ ಸ್ವಾಗತಿಸಿದರು.



ನಾವು ಧರ್ಮಸ್ಥಳ ಸಮೂಹದಲ್ಲಿ ನಡೆಸುವ ಎಲ್ಲ ಸಂಸ್ಥೆಗಳಲ್ಲಿಯೂ ಭಾರತೀಯ ಮೌಲ್ಯಗಳ ತಿಳಿವಳಿಕೆಗಳ ವಿಶೇಷ ಮಹತ್ವ ನೀಡುತ್ತೇವೆ. ನಿಜವಾದ ಭಾರತೀಯ ಮನೋಭಾವದಲ್ಲಿ ಮೌಲ್ಯಗಳು ಮತ್ತು ನೈತಿಕತೆಯನ್ನು ಭದ್ರವಾಗಿ ಹಿಡಿದಿಡುತ್ತಿರುವ ಜಾಗತಿಕ ನಾಯಕರನ್ನು ಹೊರತರಬೇಕೆಂಬುದೇ ಇದರ ಉದ್ದೇಶ.

■ ಡಾ.ಡಿ.ವೀರೇಂದ್ರ ಹೆಗ್ಗಡೆ.



ಅಲ್ಮೆನ್ ಜಾವೇದ್ ಅನುಷ್ ಭಾರ್ಗವ್ ಕ್ಲಿಫರ್ಡ್ ದೀಕ್ಷಿತ್ ದೃಶ್ಯ



ಸಂತೋಷ್‌ಕುಮಾರ್ ಅರುಣ್ ವರ್ಮ ನವನೀತ್ ಪುಷ್ಕರಾಜ್ ಸಾಗರ್ ಜೆವೂರ್

ನನ್ನ ವೃತ್ತಿಪರ ಜೀವನದ ಪ್ರತಿಯೊಂದು ಹಂತದಲ್ಲಿಯೂ ಕಾಲೇಜು ಸಹಾಯ ಮಾಡಿದೆ. ವೃತ್ತಿ ಜೀವನದ ಆಸಕ್ತಿಯಲ್ಲಿ ಉತ್ತಮ ಸಾಧನೆ ಮಾಡಲು ಸಂಸ್ಥೆ ನನಗೆ ಉತ್ತಮ ವೇದಿಕೆ ಮತ್ತು ಮೂಲ ಸೌಕರ್ಯಗಳನ್ನು ಒದಗಿಸಿದೆ.

-ಭಾರ್ಗವ್, ಚಿನ್ನದ ಪದಕ ಪಡೆದ ವಿದ್ಯಾರ್ಥಿ.